ಶ್ರೀ ಗೋವಿಂದ ಪಿ. ಒಡೆಯರ್‌ರವರು--ಮಾನ್ಯ ಮಂತ್ರಿಗಳು ಗಮನಕ್ಕೆ ತರಬೇಕೆಂದು ಹೇಳಿದರು. ಅಪ್ಪರ್ ಕೃಷ್ಣ ಪ್ರಾಜೆಕ್ಟಿನಲ್ಲಿ ಲ್ಯಾಂಡ್ ಆಕ್ವಿಷನ್ ಕೆಲಸ ಪ್ರಾರಂಭವಾಗಿ ೮-೯ ವರ್ಷಗಳಾದರೂ ಇಲ್ಲಿಯವರೆಗೆ ಲ್ಯಾಂಡ್ ಆಕ್ವಿಷನ್ ಕೇಸಸ್ ಫೈನಲ್ ಆಗಿಲ್ಲ, ಲಿಸ್ಟ್ ಪಬ್ಲಿಷ್ ಆಗಿಲ್ಲ. ಇದು ಸ್ಪಷ್ಟವಾದ ಉದಾಹರಣೆ. ಕೊನೇಪಕ್ಷ ಅಪ್ಪರ್ ಕೃಷ್ಣ ಮತ್ತಿತರ ಇಂಥ ಪ್ರಾಜೆಕ್ಟ್‌ಗಳಲ್ಲಿ ಆದರೂ ಲ್ಯಾಂಡ್ ಆಕ್ವಿಷನ್‌ಕೇಸಸ್ ಅನ್ನು ತ್ವರಿತವಾಗಿ ವಿಲೇವಾರಿ ಮಾಡುವುದಕ್ಕೆ ಯಾವ ಕ್ರಮಕೈಗೊಳ್ಳುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ--ಅದಕ್ಕೆ ಹೇಳಿದೆ, ಕರ್ನಾಟಕದಲ್ಲಿ ಲ್ಯಾಂಡ್ ಆಕ್ವಿಷನ್ ಆಕ್ಟ್‌ನ್ನು ಹೊಸದಾಗಿ ಮಾಡಬೇಕು ಎಂದು. ಈಗ ಇರತಕ್ಕ ಕಾನೂನು ಪ್ರಕಾರ ವಿಳಂಬವಾಗುತ್ತದೆ. ಹೈಕೋರ್ಟ್ ಮತ್ತೊಂದು ಕೋರ್ಟ್‌ಗೆ ಹೋಗಿ ಸ್ಟೇ ಆರ್ಡರ್ ತಂದು ಪ್ರೊಸೀಡಿಂಗ್ ಸ್ಥಗಿತಗೊಳಿಸುತ್ತಾರೆ. ಆದ್ದರಿಂದ ಎಲ್ಲವನ್ನು ಅಳವಡಿಸಿಕೊಂಡು ತಪ್ಪುನ್ನೆಲ್ಲ ಕೇಳಿ ಹೊಸದಾಗಿ ಒಂದು ಆಕ್ಟ್‌ನ್ನು ಮಾಡುತ್ತೇವೆ.

ಶ್ರೀ ಎ.ಬಿ. ಪಾಟೀಲ್--ಗುಲ್ಬರ್ಗ ಜಿಲ್ಲೆಯ ಪ್ರಾಜೆಕ್ಟ್ ಏರಿಯಾದಲ್ಲಿ ಸಾಕಷ್ಟು ಜಮೀನು ಹೋಗಿದೆ; ಆದರೆ ಇದುವರೆಗೆ ಯಾವ ಕಾಂಪನ್‌ಸೇಷನ್ ಕೊಟ್ಟಿಲ್ಲ. ಜಮೀನನ್ನು ಕಳೆದುಕೊಂಡವರಿಗೆ ಜಮೀನು ಕೂಡ ಕೊಟ್ಟಿಲ್ಲ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ಬಸವಲಿಂಗಪ್ಪ--ಆ ವಿಚಾರವನ್ನು ಈಗ ತಾನೇ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ; ಇದುವರೆಗೆ ಆ ವಿಚಾರ ನನಗೆ ಗೊತ್ತಿರಲಿಲ್ಲ. ಆದರ ಬಗ್ಗೆ ತನಿಖೆ ನಡೆಸಿ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು--ಈಗ ತಡೆಹಿಡಿಯಲಾದ ಪ್ರಶ್ನೆ ನಂ. ೫೯೩ ತೆಗೆದುಕೊಳ್ಳಬಹುದು.

Delay in completion of Bridge across Kabini River near Nanjangud

593 SRI M.C. BASAPPA (Chamarajanagar) – Will the Minister for Public Works be pleased to state:—

(a) when did the work of the bridge across Kabini river near Nanjangud was entrusted to the Contractor;

(b) the time stipulated for completion of the said bridge;

(c) the reasons for not completing it in time.

(d) when is it likely to be completed ?

SRI S. BANGARAPPA (Minister for Public Works).—

(a) The bridge work across Kabini river was originally entrusted to M/s Boraiah, Basavaiah and Sons during February 1973 and subsequently the balance work has been entrusted to M/s Karnataka State Construction Corporation Limited during May 1976.

(b) The work was stipulated to be completed by the first agency in 2 years from February 1973.

(c) The first agency backed out and balance work has been delayed by the second agency i.e. Karnataka State Construction Corporation Limited.

(d) The bridge work is expected to be completed by October 1980.

ಶ್ರೀ ಎಂ.ಸಿ. ಬಸಪ್ಪ—ಗೊತ್ತುಪಡಿಸಿದ ಕಾಲಾವಧಿಯೊಳಗೆ ಪೂರ್ಣಗೊಳಿಸದಿರಲು ಕಾರಣಗಳೇನು ಎಂಬುದಕ್ಕೆ ಮೊದಲನೆ ಏಜನ್ಸಿಯನ್ನು ತಪ್ಪಿಸಿ ಹಾಗೂ ಉಳಿದ ಕಾಮಗಾರಿಯನ್ನು ಎರಡನೆ ಏಜನ್ಸಿ ಅಂದರೆ ಕರ್ನಾಟಕ ರಾಜ್ಯದ ನಿರ್ಮಾಣ ಸಂಸ್ಥೆ 'ಲಿ'ಗೆ ನೀಡಿದ್ದು ಅದೂ ಅವರಿಂದ ನಿಧಾನವಾಗಿದೆ ಎಂದು ಹೇಳಿದ್ದೀರಿ. ಅವರಿಂದಲೂ ಕೂಡ ಕೆಲಸವಾಗದೆ ನಿಂತುಹೋಗಿದೆ ಎಂದರೆ ಅದಕ್ಕೆ ಕಾರಣವೇನು? ಕಂಟ್ರಾಕ್ಟರ್‌ಗೆ ದುಡ್ಡಿರಲಿಲ್ಲವೆ, ಎಸ್ಟಿಮೇಟ್ ತಪ್ಪಾಗಿತ್ತೆ, ಅಧಿಕಾರಿಗಳು ಗಮನ ತೆಗೆದುಕೊಳ್ಳಲಿಲ್ಲವೆ; ಇಂಥ ಯಾವುದಾದರೂ ಕಾರಣಗಳನ್ನು ಹೇಳುವುದಕ್ಕೆ ಆಗುತ್ತಿರಲಿಲ್ಲವೆ?

† ಶ್ರೀ ಎಸ್. ಬಂಗಾರಪ್ಪ—ಇಲ್ಲಿ ಮುಖ್ಯವಾಗಿ ಎರಡು ಕಾರಣಗಳು ನನ್ನ ಗಮನಕ್ಕೆ ಬಂದಿವೆ. ರೇಟಿನ ವ್ಯತ್ಯಾಸದಿಂದಾಗಿ ಮಾಡುವುದಕ್ಕಾಗುವುದಿಲ್ಲವೆಂದು ಒಂದು ರೆಪ್ರಸಂಟೇಷನ್ ಅನ್ನು ೨೯ನೇ ಜುಲೈ ೧೯೭೪ರಲ್ಲಿ ಆಗಿನ ಮಾನ್ಯ ಲೋಕೋಪಯೋಗಿ ಮಂತ್ರಿಗಳಿಗೆ ಕೊಟ್ಟಿದ್ದಾರೆ. ಮೆಟೀರಿಯಲ್ಸ್ ಹಾಗೂ ಸಿಮೆಂಟಿನ ಬೆಲೆ ಜಾಸ್ತಿಯಾಗಿದೆ; ಇದರಿಂದಾಗಿ ಒಟ್ಟು ಶೇಕಡ ೪೦ರಷ್ಟು ಬೆಲೆ ಜಾಸ್ತಿಯಾಗಿದೆ ಎಂದು ಅವರು ಕೋಟ್ ಮಾಡಿದ್ದಾರೆ, ಆ ಕಾರಣದ ಮೇಲೆ ಅವರು ಆ ಕಾರ್ಯವನ್ನು ಮಾಡಲು ಹಿಂದೆ ಸರಿದಿದ್ದಾರೆ.

ಶ್ರೀ ಎಂ. ಸಿ. ಬಸಪ್ಪ —ತಮಗೆ ಮತ್ತು ಸರ್ಕಾರಕ್ಕೆ ಹಾಗೂ ಕಂಟ್ರಾಕ್ಟರ್‌ರಿಗೆ ರೇಟ್‌ನಲ್ಲಿ ಡಿಫರೆನ್ಸ್ ಬಂದಾಗ ಯಾರಾದರೂ ಕಂಟ್ರಾಕ್ಟರ್ ಬ್ಯಾಕ್‌ಔಟ್ ಆದರೆ ತಾವು ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಮತ್ತು ಆ ಕೆಲಸಗಳನ್ನೆಲ್ಲಾ ಜಾಗ್ರತೆ ಮಾಡಿಸುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನ್ನ ಮುಂದೆ ಇರತಕ್ಕಂಥ ವರದಿಯ ಪ್ರಕಾರ ಮಾನ್ಯ ಸದಸ್ಯರಿಗೆ ಹೇಳುವುದಾದರೆ ಈ ವಿಚಾರದಲ್ಲಿ ಕಂಟ್ರಾಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ನನಗೆ ಕಂಡುಬಂದಿಲ್ಲ. ಆ ಕೆಲಸಗಳನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಬೇಕು ಎಂದು ನಮ್ಮ ಮುಂದಿರತಕ್ಕಂಥ ವರದಿ ಪ್ರಕಾರ ಒಂದು ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಯಿತು. I still hold that opinion ಅದರಂತೆ ೧೯೭೬ನೇ ಇಸವಿಯ ಮೇ ತಿಂಗಳಲ್ಲಿ ಆ ಕೆಲಸಗಳನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ಗೆ ವಹಿಸಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ತಾವು ಇಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ the total period for construction is only two years. But the Karnataka construction Corporation has not completed even after the lapse of 3 years. ಎಂದು ಹೇಳಿದ್ದೀರಿ. ತಾವು ಆ ಕೆಲಸಗಳನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಿಕೊಟ್ಟು ಈಗಾಗಲೇ ೩ ವರ್ಷವಾಯಿತು. ೨ ವರ್ಷದಲ್ಲಿ ಮುಗಿಸಬೇಕಾದ ಕೆಲಸಕ್ಕೆ ಅದನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಿದ ಮೇಲೆ ೩ ವರ್ಷವಾಗಿದೆ ತಾವು ಇದನ್ನು ಕಾರ್ಪೊರೇಷನ್‌ಗೆ ವಹಿಸಿದ ಮೇಲೆ ಇದು ಆ ದಿವಸದಿಂದಿಯಾವ ಸ್ಥಿತಿಯಲ್ಲಿ ಇತ್ತೋ ಈಗಲೂ ಅದೇ ಸ್ಥಿತಿಯಲ್ಲಿ ಇದೆ. ಇದಕ್ಕೆ ಕಾರಣವೇನು ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಷಯ ನಿಜ. ಏತಕ್ಕೆ ಎಂದರೆ ಆಗ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಕೆಲಸ ಸರಿಯಾಗಿ ಇರಲಿಲ್ಲ. ಆದರ ವಿದ್ಯಮಾನಗಳ ಬಗ್ಗೆ ಅನೇಕ ವಿಚಾರಗಳು ಈಗಾಗಲೇ ತಮ್ಮ ಗಮನದಲ್ಲಿವೆ. ಈ ಕೆಲಸವನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಯಾವಾಗ ವಹಿಸಿದರು ಕೂಡ ಅನೇಕಕಾರಣಗಳಿಂದ ತೊಂದರೆಗಳು ಉಂಟಾಗಿ ಅವರು ಆ ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ. ಮತ್ತು ಈಗಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಈ ಕೆಲಸವನ್ನು ವಹಿಸಬಾರದಾಗಿತ್ತು ಎಂಬುದೇ ನನ್ನ ಅಭಿಪ್ರಾಯ. ಆದರೂ ಅವರಿಗೆ ಕೆಲಸವನ್ನು ನಾವು ವಹಿಸಿ ಬಿಟ್ಟಿದ್ದೇವೆ. ಅವರು ಎಲ್ಲೋ ಸ್ವಲ್ಪ ಕೆಲಸವನ್ನು ಮಾಡಿಬಿಟ್ಟಿದ್ದಾರೆ. ನಾನು ಈಗಾಗಲೇ ಈ ಸದನದಲ್ಲಿ ಹಿಂದಿನ ಬಂದು ಪ್ರಶ್ನೆಗೆ ಉತ್ತರ ಸರಿಯಾಗಿಕೊಡತಕ್ಕಂಥ ಕಾಲದಲ್ಲಿ ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಬಗ್ಗೆ ಹೇಳಿದ್ದೇನೆ. ಈಗ ಅದನ್ನು ನಾವು ಕೆಲಸ ಮಾಡತಕ್ಕಂಥ ಸ್ಥಿತಿಗೆ ತಂದಿದ್ದೇವೆ. They are now capable of taking up the work this time and execute also. ಈಗಾಗಲೇ ಅವರು ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ನಾವು ಅವರಿಂದ ಮಾಡಿಸುತ್ತಿದ್ದೇವೆ.

ಈ ಕೆಲಸಗಳನ್ನು ನಾವು ಗಿರಿಯೇ ಇಸವಿಗೆ ಪೂರ್ಣಗೊಳಿಸಬೇಕೆಂದು ಗುರಿ ಇಟ್ಟು ಕೊಂಡಿದ್ದೇವೆ ಏಕೆಂದರೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ವ್ಯವಹಾರಗಳನ್ನು ನಾವು ತಹಬಂದಿಗೆ ತಂದಿರುವುದರಿಂದ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ನಾವು ಈ ಕಾರ್ಪೊರೇಷನ್‌ನವರು ಮಾಡುತ್ತಾ ಇರುವ ಕೆಲಸವನ್ನು ನೋಡುತ್ತಿದ್ದೇವೆ. ಅವರು ಚನ್ನಪಟ್ಟಣದಲ್ಲಿ ಒಂದು ಸೇತುವೆ ಕಟ್ಟುವ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಮಾಡುತ್ತಿರುವ ಕೆಲಸದಿಂದ ಅದು ಗಿರಿಯೇ ಇಸವಿಯ ಹೊತ್ತಿಗೆ ಮುಗಿಯುವುದಿಲ್ಲವೆಂದು ಕಾಣುತ್ತಿದೆ. ಅದೇನೇ ಇದ್ದರು ನಮ್ಮ ಈ ಕೆಲಸವನ್ನು ತಾವು ಯಾವಾಗ ಪ್ರಾರಂಭ ಮಾಡುತ್ತೀರಿ ? ಈಗ ಪ್ರತಿದಿನ ರೇಟುಗಳೆಲ್ಲಾ ಹೆಚ್ಚಾಗುತ್ತಿವೆ. ಅದನ್ನು ಕರೆಂಟ್ ರೇಟ್ಸ್‌ಗೆ ರಿವೈಸ್ ಮಾಡಿಸುತ್ತೀರಾ ? ಈ ಬಗ್ಗೆ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗ ನಿಮಗೂ ಒಂದು ಅಗ್ರಿಮೆಂಟ್ ಆಗಿದೆಯೇ ? Every day the dates are going up, Trh old rates have to be revised according to the current rates. The is some dispute between the construction Corporation and the Departments regarding the rates. ಈ ಬಗ್ಗೆ ತಮ್ಮ ಮಂದೆ ಮಾಹಿತಿ ಇದೆಯೇ ? ಅದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನ್ನ ಮಾಹಿತಿ ಪ್ರಕಾರ ಈ ರೇಟ್ಸ್ ಬಗ್ಗೆ ನಮ್ಮಲ್ಲಿ ಡಿಸ್ಪ್ಯೂಟ್ ಇಲ್ಲ. ಕೆಲವು ಎಕ್ವಿಪ್‌ಮೆಂಟ್‌ಗಳು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ರವರ ಹತ್ತಿರ ಇರಲಿಲ್ಲ. ಅವರು ನಮ್ಮ ಡಿಪಾರ್ಟ್‌ಮೆಂಟಿನವರನ್ನು ಕೊಡಿ ಎಂದು ಕೇಳಿದ್ದಾರೆ. ಅವರಿಗೆ ಎಕ್ವಿಪ್‌ಮೆಂಟ್‌ಗಳನ್ನು ಕೊಡಾವುದಕ್ಕಾಗುವುದಿಲ್ಲ ಎಂಬ ಅಭಿಪ್ರಾಯ ಇತ್ತು. ಆದರೂ ಅನೇಕ ಕಾರಣಗಳಿಂದ ಅದನ್ನು ಕೊಡಬೇಕಾಯಿತು. ಅವರು ಕೆಲಸವನ್ನು ಪ್ರಾರಂಭ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕೆಂದು ಎಂದು ನನಗನ್ನಿಸುತ್ತದೆ. ಮೊನ್ನೆ ಬೋರ್ಡ್ ಮೀಟಿಂಗ್‌ನಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಾಗ ಎಲ್ಲಾ ಕೆಲಸಗಳನ್ನೂ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಿಂದ ಮುಗಿಸಬೇಕು ಎನ್ನುವ ಅಭಿಪ್ರಾಯಕ್ಕೆ ಬರಲಿಲ್ಲ. ಆದರೆ ಈಗ ತೆಗೆದುಕೊಂಡಿರತಕ್ಕಂಥ ಕೆಲಸಗಳನ್ನು ಅವರಿಂದ ಮಾಡಿಸಬೇಕಾದ ಪರಿಸ್ಥಿತಿ ಇದೆ. ಅವರಿಗೆ ಮಷನರೀಸ್ ಎಲ್ಲವನ್ನೂ ಕೊಟ್ಟಿದ್ದೇವೆ. ಆದಷ್ಟು ಬೇಗ ಈ ಕೆಲಸಗಳನ್ನು ಮಾಡಿ ಮುಗಿಸಬೇಕು ಎಂದು ಬೋರ್ಡ್ ಮೀಟಿಂಗ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ. ಅದರಂತೆ ಬೇಗ ಮುಗಿಸಿಕೊಡುತ್ತೇವೆ.

MR. SPEAKER.—Any how the hon'ble Minister may please pull up the authorities to complete the constitution work. I also feel that the speed of the work is very very low. Now questions are over.

Questions for Answers on the Day (but not taken up)

Waiving of Sports and Reading Room Fee.

849. SRI ANDANAIAH (Kunigal).—

Will the Minister for Education be pleased to state :—

(a) whether it is a fact that the Government have exempted payment of fees which was being collected from students for providing games materials, news papers and other articles in order to provide free education to the students studying in Primary, Middle and High Schools ;